## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕರ್ನಾಟಕ ವಸತಿ ಶಾಲಾ 6ನೇ ತರಗತಿ ಪ್ರವೇಶಕ್ಕೆ ಪರಿಷ್ಕೃತ ಮಾರ್ಗಸೂಚಿ ಹೊರಡಿಸುವ ಬಗ್ಗೆ.

**ಓದಲಾಗಿದೆ:** ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಇವರ ಪತ್ರ ಸಂಖ್ಯೆ: ಕವಶಿಸಸ/ಶಿಕ್ಷಣ(1)/ಸಿಆರ್-18/2019-20, ದಿನಾಂಕ:28.02.2020.

******

**ಪ್ರಸ್ತಾವನೆ:**

ರಾಜ್ಯದಲ್ಲಿ ವಿವಿಧ ವರ್ಗಗಳ ಗ್ರಾಮೀಣ ಪ್ರದೇಶದ ಬಡ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗಾಗಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗದ 824 ಮೊರಾರ್ಜಿ ದೇಸಾಯಿ / ಕಿತ್ತೂರ್ ರಾಣಿ ಚನ್ನಮ್ಮ / ಡಾ|| ಬಿ.ಆರ್. ಅಂಬೇಡ್ಕರ್ / ಅಟಲ್ ಬಿಹಾರ್ ವಾಜಪೇಯಿ / ಶ್ರೀಮತಿ ಇಂದಿರಾ ಗಾಂಧಿ / ಏಕಲವ್ಯ ಮಾದರಿ ವಸತಿ ಶಾಲೆ / ಕಾಲೇಜುಗಳನ್ನು ಪ್ರಾರಂಭಿಸಲಾಗಿದೆ. ಈ ಶಾಲೆ / ಕಾಲೇಜುಗಳನ್ನು ಒಂದೇ ಕಾರ್ಯವ್ಯಾಪ್ತಿಗೆ ಒಳಪಡಿಸುವ ಉದ್ದೇಶದಿಂದ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವನ್ನು ಸ್ಥಾಪಿಸಲಾಗಿದೆ. ಪ್ರಸ್ತುತ ಈ ಶಾಲೆ / ಕಾಲೇಜುಗಳು 6 ರಿಂದ 12ನೇ ತರಗತಿಯವರೆಗೆ ಕಾರ್ಯನಿರ್ವಹಿಸುತ್ತಿವೆ. ಈ ಶಾಲೆಗಳ ಪೈಕಿ 798 ವಸತಿ ಶಾಲೆಗಳ 6ನೇ ತರಗತಿಗೆ ಲಭ್ಯವಾಗುವ 40,420 ಸೀಟುಗಳಿಗೆ ವಿದ್ಯಾರ್ಥಿಗಳನ್ನು ದಾಖಲೆ ಮಾಡಲು ಅನುಸರಿಸಬೇಕಾದ ಪ್ರವೇಶ ಪರೀಕ್ಷೆ ವಿದ್ಯಾರ್ಥಿಗಳ ಸಂಖ್ಯೆ, ವರ್ಗವಾರು ಮೀಸಲಾತಿ, ವಿಶೇಷ ವರ್ಗಗಳಿಗೆ ಅವಕಾಶ ಪರೀಕ್ಷಾ ಮಾರ್ಗಸೂಚಿಗೆ ಸಂಬಂಧಿಸಿದಂತೆ ಪರಿಷ್ಕೃತ ಆದೇಶ ಹೊರಡಿಸುವಂತೆ ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಇವರು ಮೇಲೆ ಓದಲಾದ ದಿನಾಂಕ:28.02.2020 ರ ಪ್ರಸ್ತಾವನೆಯಲ್ಲಿ ಕೋರಿರುತ್ತಾರೆ.

ಮೇಲ್ಕಂಡ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಡಿ ಬರುವ ವಸತಿ ಶಾಲೆ / ಕಾಲೇಜುಗಳಿಗೆ ಪ್ರವೇಶ ಕಲ್ಪಿಸುವ ಸಂಬಂಧ ಹೊರಡಿಸಲಾದ ಎಲ್ಲಾ ಆದೇಶಗಳನ್ನು ರದ್ದುಪಡಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಸಕಇ 94 ಮೊದೇಶಾ 2020, ಬೆಂಗಳೂರು, ದಿನಾಂಕ:10.03.2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಡಿ ಕಾರ್ಯನಿರ್ವಹಿಸುತ್ತಿರುವ 824 ಮೊರಾರ್ಜಿ ದೇಸಾಯಿ / ಕಿತ್ತೂರ್ ರಾಣಿ ಚನ್ನಮ್ಮ / ಡಾ|| ಬಿ.ಆರ್. ಅಂಬೇಡ್ಕರ್ / ಅಟಲ್ ಬಿಹಾರ್ ವಾಜಪೇಯಿ / ಶ್ರೀಮತಿ ಇಂದಿರಾ ಗಾಂಧಿ / ಏಕಲವ್ಯ ಮಾದರಿ ವಸತಿ ಶಾಲೆ / ಕಾಲೇಜುಗಳ ಪೈಕಿ 798 ವಸತಿ ಶಾಲೆಗಳಿಗೆ 6ನೇ ತರಗತಿಗೆ ಲಭ್ಯವಾಗುವ ಸೀಟುಗಳಿಗೆ ಅನುಗುಣವಾಗಿ ಪ್ರವೇಶ ಕಲ್ಪಿಸಲು ಈ ಕೆಳಕಂಡ ನಿಬಂಧನೆ ಮತ್ತು ಷರತ್ತುಗೊಳಪಟ್ಟು ಅನುಮೋದನೆ ನೀಡಿ ಆದೇಶಿಸಿದೆ.

**ನಿಬಂಧನೆ / ಷರತ್ತು / ಮಾರ್ಗಸೂಚಿಗಳು**

1. **ಪ್ರವೇಶ ಸಂಖ್ಯೆ:**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಡಿ ಕಾರ್ಯ ನಿರ್ವಹಿಸುವ ವಸತಿ ಶಾಲೆಗಳನ್ನು ಮೊರಾರ್ಜಿ ದೇಸಾಯಿ / ಕಿತ್ತೂರು ರಾಣಿ ಚೆನ್ನಮ್ಮ / ಡಾ|| ಬಿ.ಆರ್ ಅಂಬೇಡ್ಕರ್ / ಶ್ರೀಮತಿ ಇಂದಿರಾ ಗಾಂಧಿ / ಅಟಲ್ ಬಿಹಾರಿ

ವಾಜಪೇಯಿ / ಏಕಲವ್ಯ / ಕವಿರನ್ನ / ಮಾಸ್ತಿ ವೆಂಕಟೇಶ ಅಯ್ಯಂಗರ್ ಮೊದಲಾದ ಹೆಸರುಗಳಿಂದ ಕರೆಯಲಾಗುತ್ತಿದೆ. ಆ ಶಾಲೆಗಳ ಪ್ರವೇಶ ಸಂಖ್ಯೆ ಈ ಕೆಳಕಂಡಂತೆ ಇರುತ್ತದೆ.

| ಕ್ರ. ಸಂ. | ವಸತಿ ಶಾಲೆ | 6ನೇ ತರಗತಿಗೆ ಮಂಜೂರಾದ ವಿದ್ಯಾರ್ಥಿಗಳ ಸಂಖ್ಯೆ |
|---|---|---|
| 1 | ಮೊರಾರ್ಜಿ ದೇಸಾಯಿ ವಸತಿ ಶಾಲೆ | 50 |
| 2 | ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ | 50 |
| 3 | ಡಾ॥ ಬಿ.ಆರ್ ಅಂಬೇಡ್ಕರ್ ವಸತಿ ಶಾಲೆ | 50 |
| 4 | ಶ್ರೀಮತಿ ಇಂದಿರಾ ಗಾಂಧಿ ವಸತಿ ಶಾಲೆ | 50 |
| 5 | ಮಾಸ್ತಿ ವೆಂಕಟೇಶ ಅಯ್ಯಂಗರ್ ವಸತಿ ಶಾಲೆ | 50 |
| 6 | ಸಂಗೊಳ್ಳಿ ರಾಯಣ್ಣ ವಸತಿ ಶಾಲೆ | 50 |
| 7 | ಅಲೆಮಾರಿ ವಸತಿ ಶಾಲೆ | 50 |
| 8 | ಕವಿರನ್ನ ವಸತಿ ಶಾಲೆ | 50 |
| 9 | ಗಾಂಧಿತತ್ವ ವಸತಿ ಶಾಲೆ | 50 |
| 10 | ಶಿಕ್ಷಣ ಇಲಾಖೆಯಿಂದ ವರ್ಗಾವಣೆಗೊಂಡ ವಸತಿ ಶಾಲೆ | 50 |
| 11 | ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆ | 80 |
| 12 | ಏಕಲವ್ಯ ಮಾದರಿ ವಸತಿ ಶಾಲೆ | 60 |

2. **ವರ್ಗವಾರು ಸ್ಥಾನ ಹಂಚಿಕೆ:**

1. **ವರ್ಗವಾರು ಪ್ರವೇಶ ಸಂಖ್ಯೆ:-** ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಹಾಗೂ ಸಾಮಾನ್ಯ ವರ್ಗದ ವಸತಿ ಶಾಲೆಗಳಿಗೆ ವಿವಿಧ ಸರ್ಕಾರದ ಆದೇಶಗಳಲ್ಲಿ ಶೇಕಡವಾರು ಪ್ರವೇಶ ಸಂಖ್ಯೆಯನ್ನು ಕಲ್ಪಿಸಿ ಆದೇಶಲಾಗಿತ್ತು. ಶೇಕಡವಾರು ಆಧಾರದ ಮೇಲೆ ಪ್ರವೇಶ ಕಲ್ಪಿಸುವಾಗ ಬೆಸ ಸಂಖ್ಯೆ ಬಂದಾಗ ಉಂಟಾಗಬಹುದಾದ ಸಮಸ್ಯೆಯನ್ನು ಹೋಗಲಾಡಿಸಲು ಸಂಖ್ಯೆ ಆಧಾರದ ಮೇಲೆ ಸ್ಥಾನಗಳನ್ನು ಹಂಚಿಕೆ ಮಾಡುವುದು.

| ಕ್ರ. ಸಂ. | ವಸತಿ ಶಾಲೆ | ಪ.ಜಾತಿ | ಪ.ಪಂಗಡ | ಹಿಂ.ವರ್ಗ | ಸಾಮಾನ್ಯ | ಒಟ್ಟು |
|---|---|---|---|---|---|---|
| 1 | ಸಮಾಜ ಕಲ್ಯಾಣ ಇಲಾಖೆಯಿಂದ ಅನುಧಾನ ಒದಗಿಸುವ (ಅನುಸೂಚಿತ ಜಾತಿಯ ವಸತಿ ಶಾಲೆಗಳು) | 38 | 05 | 07 | 0 | 50 |

| | | | | | | |
|---|---|---|---|---|---|---|
| 2 | ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ ಅನುಧಾನ ಒದಗಿಸುವ ಪ.ಪಂಗಡದ ವಸತಿ ಶಾಲೆಗಳು | 05 | 38 | 07 | 0 | 50 |
| 3 | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅನುಧಾನ ಒದಗಿಸುವ ವಸತಿ ಶಾಲೆಗಳು | 07 | 05 | 38 | 0 | 50 |
| 4 | ಶಿಕ್ಷಣ ಇಲಾಖೆಯಿಂದ ವರ್ಗಾವಣೆಗೊಂಡ (ಸಾಮಾನ್ಯ) | 08 | 05 | 12 | 25 | 50 |
| 5 | ಏಕಲವ್ಯ ಮಾದರಿ ವಸತಿ ಶಾಲೆಗಳು | 04 | 54 | 02 | 0 | 60 |
| 6 | ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳು (ಪ.ಜಾತಿ) | 60 | 08 | 12 | 0 | 80 |
| 7 | ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳು (ಪ.ಪಂಗಡ) | 08 | 60 | 12 | 0 | 80 |
| 8 | ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳು (ಹಿಂ.ವರ್ಗ) | 12 | 08 | 60 | 0 | 80 |

- ❖ ಅಲೆಮಾರಿ ವಸತಿ ಶಾಲೆಗೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಘೋಷಿಸಲಾಗಿರುವ ಅಲೆಮಾರಿ ವರ್ಗದ ಅಭ್ಯರ್ಥಿಗಳಿಗೆ ಶೇಕಡ 100ರಷ್ಟು ಪ್ರವೇಶ ಕಲ್ಪಿಸುವುದು.
- ❖ ಶಿಕ್ಷಣ ಇಲಾಖೆಯಿಂದ ವರ್ಗಾವಣೆಗೊಂಡ 28 ವಸತಿ ಶಾಲೆಗಳಲ್ಲಿ ಸಾಮಾನ್ಯ ವರ್ಗಕ್ಕೆ ಸೇರಿದ ಅಭ್ಯರ್ಥಿಗಳಿಗೆ ಶೇ 50% ರಷ್ಟು ಸ್ಥಾನಗಳನ್ನು ಹಂಚಿಕೆ ಮಾಡುವುದು. ಸಾಮಾನ್ಯ ವರ್ಗದ ಸ್ಥಾನಗಳಿಗೆ ಆದಾಯ ಪರಿಮಿತಿ ಇಲ್ಲದೆ ಎಲ್ಲಾ ವರ್ಗದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ.

3. <u>ವಿಶೇಷ ವರ್ಗಗಳಿಗೆ ಸ್ಥಾನ ಹಂಚಿಕೆ:</u>

| ಕ್ರ. ಸಂ. | ವರ್ಗ | ಹಂಚಿಕೆ | 50 ಸಂಖ್ಯೆ | 60 ಸಂಖ್ಯೆ | 80 ಸಂಖ್ಯೆ |
|---|---|---|---|---|---|
| 1. | ಆಶ್ರಮ ಶಾಲೆ | ಶೇ. 10 | 5 | 6 | 8 |
| 2. | ಅಲೆಮಾರಿ-ಅರೆ ಅಲೆಮಾರಿ, ಸೂಕ್ಷ್ಮ-ಅತಿ ಸೂಕ್ಷ್ಮ | ಶೇ. 10 | 5 | 6 | 8 |
| 3. | ಅಂಗವಿಕಲ | ಶೇ. 4 | 2 | 2 | 3 |
| 4. | ಮಾಜಿ ಸೈನಿಕ | ಶೇ. 4 | 2 | 2 | 3 |
| 5. | ದುರ್ಬಲ ವರ್ಗ | ಶೇ. 5 | 3 | 4 | 5 |
| 6. | ಸಫಾಯಿ ಕರ್ಮಚಾರಿ | ಶೇ. 5 | 2 | 3 | 3 |

❖ ವಿಶೇಷ ದುರ್ಬಲ ವರ್ಗದಡಿ ಅರ್ಜಿ ಸಲ್ಲಿಸುವ ಎಲ್ಲಾ ಅಭ್ಯರ್ಥಿಗಳು ಕಡ್ಡಾಯವಾಗಿ ಪ್ರವೇಶ ಪರೀಕ್ಷೆಗೆ ಹಾಜರಾಗಿರಬೇಕು.

## 4. ವಿಶೇಷ ವರ್ಗಗಳ ಅರ್ಥ

**4.1 ಆಶ್ರಮ ಶಾಲೆ ವಿದ್ಯಾರ್ಥಿ:** ಸಮಾಜ ಕಲ್ಯಾಣ ಇಲಾಖೆ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಆಶ್ರಮ/ವಸತಿ ಶಾಲೆಯಲ್ಲಿ ಕನಿಷ್ಠ ಒಂದು ವರ್ಷ ಅಧ್ಯಯನ ಮಾಡಿ ವಾರ್ಷಿಕ ಪರೀಕ್ಷೆ ಬರೆದು, ಉತ್ತೀರ್ಣನಾದ ವಿದ್ಯಾರ್ಥಿಯನ್ನು ಮಾತ್ರ "ಆಶ್ರಮಶಾಲೆ ವಿದ್ಯಾರ್ಥಿ" ಎಂದು ಪರಿಗಣಿಸುವುದು. ಸಂಬಂಧ ಪಟ್ಟ ವಸತಿ ಶಾಲೆಯ ಮುಖ್ಯೋಪಧ್ಯಾಯರಿಂದ ಅನುಬಂಧ-1 ರಲ್ಲಿ ನೀಡಲಾದ 'ವ್ಯಾಸಂಗ ಪ್ರಮಾಣ' ಪತ್ರವನ್ನು ಪಡೆದು ದಾಖಲೆ ಪರಿಶೀಲನೆ ಸಂದರ್ಭದಲ್ಲಿ ಹಾಜರುಪಡಿಸುವುದು.

**4.2 ಅಲೆಮಾರಿ / ಅರೆ ಅಲೆಮಾರಿ ವಿದ್ಯಾರ್ಥಿಗಳು:** ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಗುರುತಿಸಲಾದ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಹಾಗೂ ಹಿಂದುಳಿದ ವರ್ಗಗಳಲ್ಲಿನ ಸೂಕ್ಷ್ಮ / ಅತಿ ಸೂಕ್ಷ್ಮ, ಅಲೆಮಾರಿ/ ಅರೆ ಅಲೆಮಾರಿ ಜಾತಿಗೆ ಸೇರಿದ ವಿದ್ಯಾರ್ಥಿಗಳನ್ನು ಅಲೆಮಾರಿ/ಅರೆ ಅಲೆಮಾರಿ ವಿದ್ಯಾರ್ಥಿ ಎಂದು ಪರಿಗಣಿಸುವುದು.

ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ನಿಗದಿಪಡಿಸಲಾದ ನಮೂನೆಯಲ್ಲಿ ಜಾತಿ ಪ್ರಮಾಣ ಪತ್ರವನ್ನು ಪಡೆಯುವುದು.

**4.3 "ದೈಹಿಕ ಅಂಗವಿಕಲ ಅಭ್ಯರ್ಥಿ" ಅಥವಾ "ಅಂಗವಿಕಲ ವ್ಯಕ್ತಿ" ಎಂದರೆ:-**

ವೈಧ್ಯಕೀಯ ಪ್ರಾಧಿಕಾರವು ಪ್ರಮಾಣೀಕರಿಸಿರುವಂತೆ ಶೇಕಡಾ ನಲವತ್ತಕ್ಕಿಂತ ಕಡಿಮೆಯಿಲ್ಲದಂತೆ ಈ ಮುಂದಿನ ಯಾವುದೇ ಒಂದು ದೋಷದಿಂದ ಬಳಲುತ್ತಿರುವ ವ್ಯಕ್ತಿ.

1. ಮಂದ ದೃಷ್ಟಿ
2. ವಾಸಿಯಾಗಿರುವ ಕುಷ್ಠರೋಗ
3. ದುರ್ಬಲ ಶ್ರವಣಶಕ್ತಿ
4. ಚಲನಶಕ್ತಿ ಇಲ್ಲದಿರುವುದು

**4.4 ಮಾಜಿ ಸೈನಿಕರಿಗೆ ಮೀಸಲಾತಿ:** ಭದ್ರತಾ ದಳ, ಸೇನಾ ಪಡೆಗಳಿಂದ ನಿಗಧಿಪಡಿಸಲ್ಪಟ್ಟ ಪ್ರಾಧಿಕಾರಿಯಿಂದ 'ಮಾಜಿ ಸೈನಿಕ' ಪ್ರಮಾಣ ಪತ್ರವನ್ನು ಪಡೆದಿರುವ ಪೋಷಕರ/ಪಾಲಕರ ಮಕ್ಕಳು 'ಮಾಜಿ ಸೈನಿಕ' ಮೀಸಲಾತಿ ಅಡಿ ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ.

**4.5 ವಿಶೇಷ ದುರ್ಬಲ ವರ್ಗ:** ದೇವದಾಸಿ / ಹೆಚ್‌ಐವಿ ಪೀಡಿತರು / ತಂದೆ ಅಥವಾ ತಾಯಿ ಇಲ್ಲದ (ಏಕ ಪೋಷಕರ ಮಕ್ಕಳು) / ಅನಾಥ ಮತ್ತು ಬಾಲ ಕಾರ್ಮಿಕರ ಮಕ್ಕಳು ಹಾಗೂ ಪ್ರವಾಹಪೀಡಿತರು ಸಂಬಂಧಪಟ್ಟ ಪ್ರಾಧಿಕಾರಿಗಳಿಂದ ವಿಶೇಷ ದುರ್ಬಲ ವರ್ಗಕ್ಕೆ ಸೇರಿಸಿದ ದೃಢೀಕೃತ ಪ್ರಮಾಣ ಪತ್ರ ಪಡೆದಿರಬೇಕು. ಈ ಮೇಲ್ಕಂಡ ವಿಶೇಷ ದುರ್ಬಲ ವರ್ಗಕ್ಕೆ ಧೃಡೀಕರಣ ಪತ್ರ ನೀಡಲು ಸರ್ಕಾರದಿಂದ ಅಧಿಕೃತವಾಗಿ ಯಾವುದೇ ಪ್ರಾಧಿಕಾರವನ್ನು ಘೋಷಿಸಿರದಿದ್ದರೆ, ಸಂಘದಿಂದ ಪ್ರಕಟಿಸಲಾಗಿರುವ ನಮೂನೆ-2ರಲ್ಲಿ ಕನಿಷ್ಠ ಗ್ರೂಪ್-ಬಿ ದರ್ಜೆಯ ಅಧಿಕಾರಿಯಿಂದ ಧೃಡೀಕರಿಸಲ್ಪಟ್ಟ ಪ್ರಮಾಣ ಪತ್ರ ಹಾಜರುಪಡಿಸುವುದು.

**ಸೂಚನೆ:-** ವಿಶೇಷ ದುರ್ಬಲ ವರ್ಗದ ಅಡಿ ವಿವಿಧ 06 ದುರ್ಬಲ ವರ್ಗಗಳಿಗೆ ಪ್ರವೇಶ ಅವಕಾಶ ಕಲ್ಪಿಸಲಾಗಿದೆ. 06 ದುರ್ಬಲ ವರ್ಗಗಳಲ್ಲಿ ಯಾವ ಅಭ್ಯರ್ಥಿ ಹೆಚ್ಚು ಅಂಕಗಳಿಸಿರುತ್ತಾರೋ ಅವರಿಗೆ ವಿಶೇಷ ದುರ್ಬಲ ವರ್ಗದ ಅಡಿ ಪ್ರವೇಶ ಅವಕಾಶ ಕಲ್ಪಿಸುವುದು. 06 ವರ್ಗಗಳ ನಡುವೆ ಒಳ ಆಂತರಿಕ ಮೀಸಲಾತಿಯನ್ನು ಅನುಸರಿಸಬಾರದು.

**4.6 ಸಫಾಯಿ ಕರ್ಮಚಾರಿ:** ಸರ್ಕಾರ ನಿಗಧಿಪಡಿಸಿರುವ ನಿಯಮಾನುಸಾರವಾಗಿ ಸಂಬಂಧಪಟ್ಟ ಪಟ್ಟಣ ಪಂಚಾಯಿತಿ/ ನಗರ ಸಭೆ/ ಮಹಾನಗರ ಪಾಲಿಕೆಯ, ಮುಖ್ಯ ಅಧಿಕಾರಿ/ಪೌರಾಯುಕ್ತರು/ಆಯುಕ್ತರಿಂದ ನಿಗಧಿತ ನಮೂನೆಯಲ್ಲಿ ಸಫಾಯಿ ಕರ್ಮಚಾರಿ ಪ್ರಮಾಣ ಪತ್ರ ಪಡೆದಿರುವವರು.

**4.7 ರೈತರ ಆತ್ಮಹತ್ಯೆ :** ಆತ್ಮಹತ್ಯೆ ಮಾಡಿಕೊಂಡ ರೈತ ಕುಟುಂಬದ ವಿಧ್ಯಾರ್ಥಿಗಳಿಗೆ ರಾಜ್ಯದ ಯಾವುದೇ ವಸತಿಶಾಲೆಯಲ್ಲಿ ಖಾಲಿ ಇರುವು ಸ್ಥಾನಕ್ಕೆ ನೇರವಾಗಿ ಪ್ರವೇಶ ಕಲ್ಪಿಸುವುದು. ಪ್ರವೇಶ ಪ್ರಕ್ರೀಯೆ ಮುಕ್ತಾಯಗೊಂಡ ತರುವಾಯ ಯಾವುದೇ ಸಂಧರ್ಭದಲ್ಲಿ ರೈತರ ಆತ್ಮಹತ್ಯೆಯಂತಹ ದುರಂತ ನಡೆದ ಕುಟುಂಬ ವಿದ್ಯಾರ್ಥಿಗೆ ಪ್ರವೇಶ ಅವಕಾಶ ಬಯಸಿ ಕೋರಿಕೆ ಬಂದರೆ, ಖಾಲಿ ಉಳಿದ ಸ್ಥಾನಕ್ಕೆ ಲಿಂಗ, ವರ್ಗ/ಆರ್ಥಿಕ ಮಿತಿಯನ್ನು ಪರಿಗಣಿಸದೆ ನೇರವಾಗಿ ಪ್ರವೇಶ ಅವಕಾಶ ಕಲ್ಪಿಸುವುದು.

**4.8 ಸ್ಥಳೀಯ ಅಭ್ಯರ್ಥಿ :** ಒಂದು ತಾಲ್ಲೂಕಿನ ವಸತಿ ಶಾಲೆಗಳಿಗೆ ಅದೇ ತಾಲ್ಲೂಕಿನ ಮೂಲ ನಿವಾಸಿಯಾದ ವಿದ್ಯಾರ್ಥಿಗಳಿಗೆ ಶೇ.25% ರಷ್ಟು ಸ್ಥಾನವನ್ನು ಹಂಚಿಕೆಮಾಡಲಾಗಿದೆ. 50 ಸಂಖ್ಯೆಯ ವಸತಿ ಶಾಲೆಗೆ 13 ಸ್ಥಾನಗಳನ್ನು, 60 ಸಂಖ್ಯೆಯ ವಸತಿ ಶಾಲೆಗೆ 15 ಸ್ಥಾನಗಳು ಹಾಗೂ 80 ಸಂಖ್ಯೆಯ ವಸತಿ ಶಾಲೆಗೆ 20 ಸ್ಥಾನಗಳನ್ನು ಸ್ಥಳೀಯ ಅಭ್ಯರ್ಥಿಗೆ ಮೀಸಲಿಡುವುದು. ಒಂದು ತಾಲ್ಲೂಕಿಗೆ ನಿಗದಿಪಡಿಸಿದ ಸಂಖ್ಯೆಯ "ಸ್ಥಳೀಯ ಅಭ್ಯರ್ಥಿ"ಗಳು ದೊರೆಯದಿದ್ದರೆ, ರಾಜ್ಯಮಟ್ಟದ ಕೌನ್ಸಿಲಿಂಗ್ ಮೂಲಕ ಖಾಲಿ ಸ್ಥಾನಗಳನ್ನು ಭರ್ತಿಮಾಡುವುದು. ಸ್ಥಳೀಯ ಅಭ್ಯರ್ಥಿ ಎಂದು ರುಜುವಾತು ಪಡಿಸಲು SATS ನಲ್ಲಿ ಲಭ್ಯವಿರುವ ಸ್ಥಳೀಯ ಅಭ್ಯರ್ಥಿ ಮಾಹಿತಿ ಅಥವಾ ಆಧಾರ್ ಕಾರ್ಡ್ ಅಥವಾ ಜಾತಿ ಪ್ರಮಾಣ ಪತ್ರ ಅಥವಾ ಪಡಿತರ ಚೀಟಿ ಅಥವಾ ವಾಸಸ್ಥಳ ಪ್ರಮಾಣ ಪತ್ರ ಹೊಂದಿರಬೇಕು.

**5. ಹಿಂದುಳಿದ ವರ್ಗಗಳ ಮೀಸಲಾತಿ:-**

ಕರ್ನಾಟಕ ರಾಜ್ಯದಲ್ಲಿ ಶೈಕ್ಷಣಿಕ ಪ್ರವೇಶ, ನೇಮಕಾತಿ ಮೊದಲಾದವುಗಳಿಗೆ ಹಿಂದುಳಿದ ವರ್ಗದ ಜಾತಿಗಳನ್ನು 5 ವರ್ಗಗಳನ್ನಾಗಿ ವಿಂಗಡಿಸಿ, ಈ ಕೆಳಕಂಡಂತೆ ಶೇಕಡಾವಾರು ಮೀಸಲಾತಿಯನ್ನು ಅನುಸರಿಸುವುದು.

| ವರ್ಗ | ಶೇಕಡ |
|---|---|
| ಪ್ರ.ವರ್ಗ-1 | 4% |
| ಪ್ರ.ವರ್ಗ-2ಎ | 15% |
| ಪ್ರ.ವರ್ಗ-2ಬಿ | 4% |
| ಪ್ರ.ವರ್ಗ-3ಎ | 4% |
| ಪ್ರ.ವರ್ಗ-3ಬಿ | 5% |

ಇದೇ ಶೇಕಡವಾರು ಮೀಸಲಾತಿ ಅನುಪಾತವನ್ನು, ವಸತಿ ಶಿಕ್ಷಣ ಸಂಘದಡಿಯ ವಸತಿ ಶಾಲೆಗಳಲ್ಲಿ ಹಿಂದುಳಿದ ವರ್ಗದ ಅಭ್ಯರ್ಥಿಗಳಿಗೆ ಪ್ರವೇಶಕ್ಕೆ ಅವಕಾಶ ಕಲ್ಪಿಸುವಾಗ ಅನುಸರಿಸುವುದು.

**6. ಜಾತಿ ಮತ್ತು ಆದಾಯ ಪ್ರಮಾಣ ಪತ್ರ**

| ವರ್ಗ | ಜಾತಿ | ಆದಾಯ |
|---|---|---|
| ಹಿಂದುಳಿದ ವರ್ಗ | ಹಿಂದುಳಿದ ವರ್ಗಕ್ಕೆ ಸೇರಿದ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಚಾಲ್ತಿಯಲ್ಲಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ನಿಗಧಿತ ನಮೂನೆಯಲ್ಲಿ ಹೊಂದಿರುವುದು. | ಹಿಂದುಳಿದ ವರ್ಗಕ್ಕೆ ಸೇರಿದ 2ಎ, 2ಬಿ, 3ಎ, 3ಬಿ ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ಆದಾಯ ರೂ.1,00,000/- ಮಿತಿಯೊಳಗಿರಬೇಕು. ಪ್ರ.ವರ್ಗ-1ಕ್ಕೆ ಸೇರಿದ ಅಭ್ಯರ್ಥಿಗಳ ಕುಟುಂಬದ ರೂ.2,50,000/- ಆದಾಯ ಮಿತಿಯೊಳಗಿರಬೇಕು. |
| ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಚಾಲ್ತಿಯಲ್ಲಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ನಿಗಧಿತ ನಮೂನೆಯಲ್ಲಿ ಹೊಂದಿರುವುದು. | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದ ಅಭ್ಯರ್ಥಿಯ ಕುಟುಂಬದ ವಾರ್ಷಿಕ ಆದಾಯ ರೂ.2,50,000/- ಮಿತಿಯೊಳಗಿರತಕ್ಕದ್ದು. |

## 7. ಅಭ್ಯರ್ಥಿ ಅರ್ಜಿ ಸಲ್ಲಿಸಲು ಇರಬೇಕಾದ ಅರ್ಹತೆಗಳು

1. ವಿದ್ಯಾರ್ಥಿಯು 5ನೇ ತರಗತಿಯನ್ನು ಸರ್ಕಾರದಿಂದ ಅನುಮೋದಿಸಲ್ಪಟ್ಟ ಶಾಲೆಯಲ್ಲಿ ಅಧ್ಯಯನ ಮಾಡುತ್ತಿರಬೇಕು. ದಾಖಲೆ ಪರಿಶೀಲನೆ ಸಂದರ್ಭದಲ್ಲಿ 5ನೇ ತರಗತಿ ಉತ್ತೀರ್ಣರಾಗಿರುವ ಅಂಕಪಟ್ಟಿ ಹೊಂದಿರಬೇಕು.
2. ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರಬೇಕು.
3. 09 ರಿಂದ 13 ವಯೋಮಾನದವರಾಗಿರಬೇಕು.

## 8. ಪ್ರವೇಶ ಪರೀಕ್ಷೆ ವಿಧಾನ

1. 6 ನೇ ತರಗತಿಗೆ ಪ್ರವೇಶ ಬಯಸುವ ವಿದ್ಯಾರ್ಥಿಗಳು ಕಡ್ಡಾಯವಾಗಿ ಪ್ರವೇಶ ಪರೀಕ್ಷೆಯನ್ನು ಬರೆಯಬೇಕು. ಪ್ರವೇಶ ಪರೀಕ್ಷೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಏಇಂ) ಮೂಲಕ ಅಥವಾ ಯಾವುದಾದರೂ ಏಜನ್ಸಿಯಿಂದ ನಡೆಸುವುದು.
2. ಪ್ರವೇಶ ಪರೀಕ್ಷೆಯ ಪ್ರಶ್ನೆ ಪತ್ರಿಕೆ 100 ಅಂಕದ ಬಹು ಆಯ್ಕೆ ಮಾದರಿಯಲ್ಲಿರಬೇಕು.

| | | |
|---|---|---|
| ಕನ್ನಡ | 20 ಪ್ರಶ್ನೆ | 20- ಅಂಕ |
| ಇಂಗ್ಲೀಷ್ | 20 ಪ್ರಶ್ನೆ | 20- ಅಂಕ |
| ಗಣಿತ | 20 ಪ್ರಶ್ನೆ | 20- ಅಂಕ |
| ಸಮಾಜ ವಿಜ್ಞಾನ | 20 ಪ್ರಶ್ನೆ | 20- ಅಂಕ |
| ಸಾಮಾನ್ಯ ವಿಜ್ಞಾನ | 20 ಪ್ರಶ್ನೆ | 20- ಅಂಕ |
| ಒಟ್ಟು | 100 ಪ್ರಶ್ನೆ | 100- ಅಂಕ |

3. 100 ಅಂಕದ 100 ಪ್ರಶ್ನೆಗಳಿಗೆ ಉತ್ತರಿಸಲು 120 ನಿಮಿಷದ ಸಮಯವಕಾಶ ನೀಡುವುದು.
4. ವಸತಿ ಶಾಲೆಯ ಆಯ್ಕೆಗೆ, ವಿದ್ಯಾರ್ಥಿಯ ಪ್ರವೇಶ ಪರೀಕ್ಷೆಯಲ್ಲಿ ಗಳಿಸಿದ ಅಂಕವನ್ನು ಮಾತ್ರ ಮಾನದಂಡವಾಗಿ ಪರಿಗಣಿಸಬೇಕು.
5. ಪ್ರಶ್ನೆ ಪತ್ರಿಕೆ ಕನ್ನಡ ಹಾಗೂ ಇಂಗ್ಲೀಷ್ ಎರಡು ಭಾಷೆಯಲ್ಲಿರಬೇಕು.
6. ಶೇ 90% ರಷ್ಟು ಪ್ರಶ್ನೆಗಳು 4 ಮತ್ತು 5ನೇ ತರಗತಿಯ ಪಠ್ಯಾಧಾರಿತವಾಗಿರಬೇಕು.

## 9. ಕೌನ್ಸಿಲಿಂಗ್ ವಿಧಾನ

1. ಮೊದಲ ಹಂತದ ಆಯ್ಕೆ ಪ್ರಕ್ರಿಯೆಯಲ್ಲಿ ಅಭ್ಯರ್ಥಿಯ ತಮ್ಮ ಸ್ವಂತ ಜಿಲ್ಲೆಯ ವಸತಿ ಶಾಲೆಗಳಿಗೆ ಮಾತ್ರ ಪ್ರವೇಶ ಪಡೆಯಲು ಅರ್ಹರಿರುತ್ತಾರೆ.
2. ಅರ್ಜಿ ಸಲ್ಲಿಸುವಾಗ ಅಭ್ಯರ್ಥಿಯ ತಾವು ಸೇರ ಬಯಸುವ ವಸತಿ ಶಾಲೆಯನ್ನು ಆಯ್ಕೆ ಮಾಡಿಕೊಳ್ಳುವುದು.
3. ಮೆರಿಟ್ ಕಂ ರೋಸ್ಟರ್ ಆಧಾರದ ಮೇಲೆ ವಿದ್ಯಾರ್ಥಿ ಬಯಸುವ ವಸತಿ ಶಾಲೆಯನ್ನು ಕಂಪ್ಯೂಟರೈಸ್ಡ್ ಆಟೋ ಸಲೆಕ್ಷನ್ ಮಾಡುವುದು.
4. ಮೊದಲ ಸುತ್ತಿನ ಆಯ್ಕೆ ಪಟ್ಟಿಯನ್ನು ಪ್ರಕಟಿಸಿದ ತರುವಾಯ ಉಳಿಕೆ ಸ್ಥಾನಗಳಿಗೆ 2ನೇ ಆಯ್ಕೆ ಪಟ್ಟಿಯನ್ನು ಬಿಡುಗಡೆಗೊಳಿಸಬೇಕು. 2 ಅಥವಾ 3ನೇ ಸುತ್ತಿನ ಕೌನ್ಸಿಲಿಂಗ್ ನಡೆಸುವುದು. ಇನ್ನು ಹೆಚ್ಚಿನ ಸುತ್ತಿನ ಕೌನ್ಸಿಲಿಂಗ್ ಅಗತ್ಯವಿದೆ ಎಂಬ ಅಂಶ ಗಮನಕ್ಕೆ ಬಂದರೆ ಕೌನ್ಸಿಲಿಂಗ್ ನಡೆಸುವುದು.

5. ಜಿಲ್ಲಾ ಮಟ್ಟದ ಕೌನ್ಸಿಲಿಂಗ್ ಮುಕ್ತಾಯಗೊಳಿಸಿದ ತರುವಾಯ ಖಾಲಿ ಉಳಿಯುವ ಸ್ಥಾನಗಳಿಗೆ ರಾಜ್ಯ ಮಟ್ಟದ ಕೌನ್ಸಿಲಿಂಗ್ ಪ್ರಕ್ರೀಯ ಪ್ರಾರಂಭಿಸುವುದು.
6. ಅರ್ಜಿ ಸಲ್ಲಿಸಿ, ಪ್ರವೇಶ ಲಭಿಸದ ವಿದ್ಯಾರ್ಥಿಗಳು ಮಾತ್ರ ರಾಜ್ಯಮಟ್ಟದ ಆಯ್ಕೆ ಪ್ರಕ್ರಿಯೆ ಸಂದರ್ಭದಲ್ಲಿ ರಾಜ್ಯದ ಯಾವುದೇ ಜಿಲ್ಲೆ ಹಾಗೂ ವಸತಿ ಶಾಲೆಯನ್ನು ಆಯ್ಕೆ ಮಾಡಿಕೊಳ್ಳುವುದು.
7. ಈಗಾಗಲೇ ಅರ್ಜಿ ಸಲ್ಲಿಸಿ, "ಕ್ರೈಸ್ ಟೆಸ್ಟ್" ಬರೆದ ಅಭ್ಯರ್ಥಿಗಳು ಮಾತ್ರ ರಾಜ್ಯಮಟ್ಟದ ಆಯ್ಕೆಗೆ ಅರ್ಹರಾಗಿರುತ್ತಾರೆ. ನೂತನವಾಗಿ ಅರ್ಜಿ ಸಲ್ಲಿಸಲು ಅವಕಾಶವಿಲ್ಲ.
8. ರಾಜ್ಯ ಮಟ್ಟದ ಆಯ್ಕೆ ಪಟ್ಟಿ 3 ಅಥವಾ 4 ಸುತ್ತಿನಲ್ಲಿ ಕೌನ್ಸಿಲಿಂಗ್ ನಡೆಸಿದ ತರುವಾಯವೂ, ಖಾಲಿ ಸೀಟುಗಳು ಉಳಿದರೆ, 3ನೇ ಹಂತದಲ್ಲಿ ಜಿಲ್ಲಾ ಉಪ/ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ರವರು ಸ್ಥಳೀಯವಾಗಿ ಖಾಲಿ ಉಳಿದ ಸ್ಥಾನಗಳಿಗೆ ಅರ್ಜಿ ಆಹ್ವಾನಿಸಿ ಪ್ರವೇಶ ಅವಕಾಶ ಕಲ್ಪಿಸುವುದು.

## 10. ಲಿಂಗ ಹಾಗೂ ಜಾತಿವಾರು ಖಾಲಿ ಉಳಿದ ಸ್ಥಾನಗಳ ಭರ್ತಿ

1. ಬಾಲಕ ಸ್ಥಾನ ಖಾಲಿ ಉಳಿದರೆ, ಅದೇ ವರ್ಗದ ಬಾಲಕಿಯರಿಗೆ ಅವಕಾಶ ಕಲ್ಪಿಸುವುದು.
2. ಬಾಲಕಿ ಸ್ಥಾನ ಖಾಲಿ ಉಳಿದರೆ, ಅದೇ ವರ್ಗದ ಬಾಲಕರಿಗೆ ಅವಕಾಶ ಕಲ್ಪಿಸುವುದು.
3. ಪರಿಶಿಷ್ಟ ಜಾತಿಗೆ ಮೀಸಲಾದ ಸ್ಥಾನ ಖಾಲಿ ಉಳಿದರೆ ಕ್ರಮವಾಗಿ ಪರಿಶಿಷ್ಟ ವರ್ಗ, ಪ.ವರ್ಗ-1, 2ಎ, 2ಬಿ, 3ಎ, 3ಬಿ ಅಭ್ಯರ್ಥಿಗೆ ಅವಕಾಶ ಕಲ್ಪಿಸುವುದು.
4. ಪರಿಶಿಷ್ಟವರ್ಗದ ಸ್ಥಾನ ಖಾಲಿ ಉಳಿದರೆ ಕ್ರಮವಾಗಿ ಪರಿಶಿಷ್ಟ ಜಾತಿ, ಪ.ವರ್ಗ-1, 2ಎ, 2ಬಿ, 3ಎ, 3ಬಿ ಅಭ್ಯರ್ಥಿಗೆ ಕ್ರಮವಾಗಿ ಅವಕಾಶ ಕಲ್ಪಿಸುವುದು.
5. ಪ.ವರ್ಗ-1ರಲ್ಲಿ ಖಾಲಿ ಉಳಿದರೆ 2ಎ, 2ಬಿ, 3ಎ, 3ಬಿ, ಪರಿಶಿಷ್ಟ ಜಾತಿ, ಪ.ವರ್ಗದ ಅಭ್ಯರ್ಥಿಗೆ ಕ್ರಮವಾಗಿ ಅವಕಾಶ ಕಲ್ಪಿಸುವುದು.
6. 2ಎ ವರ್ಗದಲ್ಲಿ ಖಾಲಿ ಉಳಿದರೆ ಕ್ರಮವಾಗಿ ಪ.ವರ್ಗ-1, 2ಬಿ, 3ಎ, 3ಬಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅಭ್ಯರ್ಥಿಗೆ ಅವಕಾಶ ಕಲ್ಪಿಸುವುದು.
7. 2ಬಿ ಯಲ್ಲಿ ಖಾಲಿ ಉಳಿದರೆ, ಪ.ವರ್ಗ-1, 2ಎ. 2ಬಿ, 3ಬಿ, ಪರಿಶಿಷ್ಟ ಜಾತಿ, ಪ.ವರ್ಗದ ಅಭ್ಯರ್ಥಿಗೆ ಅವಕಾಶ ಕಲ್ಪಿಸುವುದು.
8. 3ಎ ಯಲ್ಲಿ ಖಾಲಿ ಉಳಿದರೆ, ಕ್ರಮವಾಗಿ ಪ.ವರ್ಗ-1, 2ಎ. 2ಬಿ, 3ಬಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅಭ್ಯರ್ಥಿಗೆ ಅವಕಾಶ ಕಲ್ಪಿಸುವುದು.
9. 3ಬಿ ಯಲ್ಲಿ ಖಾಲಿ ಉಳಿದರೆ, ಪ.ವರ್ಗ-1, 2ಎ, 2ಬಿ, 3ಎ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅಭ್ಯರ್ಥಿಗೆ ಕ್ರಮವಾಗಿ ಅವಕಾಶ ಕಲ್ಪಿಸುವುದು.

ಉದಾ: ಯಾವುದೇ ವರ್ಗದಲ್ಲಿ ಎಷ್ಟು ಸ್ಥಾನ ಖಾಲಿ ಉಳಿದರೂ, ಮೇಲ್ಕಂಡ ಕ್ರಮಾಣಿಕೆಯನ್ನು ಅನುಸರಿಸುವುದು. ಒಂದು ವೇಳೆ ಪರಿಶಿಷ್ಟ ಜಾತಿಯ 04 ಸ್ಥಾನಗಳು ಉಳಿಕೆಯಾಗಿದ್ದರೆ, ಮೇಲ್ಕಂಡ ಆ 04 ಸ್ಥಾನಗಳ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಲಭಿಸುತ್ತವೆ. ಪರಿಶಿಷ್ಟ ವರ್ಗದ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದರೆ ಮೇಲ್ಕಂಡಂತೆ ಕ್ರಮಾನುಸಾರ ಆಯ್ಕೆ ಮಾಡುವುದು.

**11. ನೇರ ಮೀಸಲಾತಿ ರೋಸ್ಟರ್**

ಜಿಲ್ಲೆಯನ್ನು ಒಂದು ಘಟಕವಾಗಿ ಪರಿಗಣಿಸಿ, ನೇರ ಸಮತಲ ರೋಸ್ಟರ್ ವಿಧಾನದ ಮೂಲಕ ವಿದ್ಯಾರ್ಥಿಗಳಿಗೆ ಪ್ರವೇಶ ಅವಕಾಶವನ್ನು ಕಲ್ಪಿಸುವುದು. ಆಯಾ ವರ್ಗಕ್ಕೆ ನಿಗದಿಪಡಿಸಲಾದ ಮೀಸಲಾತಿ ಅನುಸಾರ ವಿಶೇಷ ದುರ್ಬಲ ವರ್ಗಗಳಿಗೆ ಪ್ರವೇಶ ಅವಕಾಶ ಕಲ್ಪಿಸುವುದು.

**12. ವಸತಿ ಶಾಲಾ ಸಿಬ್ಬಂದಿ ಮಕ್ಕಳಿಗೆ ಅವಕಾಶ:-**

ವಸತಿ ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ ಬೋಧಕ/ಬೋಧಕೇತರ ಸಿಬ್ಬಂದಿಗಳ ಮಕ್ಕಳಿಗೆ ವಾರ್ಷಿಕ ಆದಾಯ ಮಿತಿ ಇಲ್ಲದೆ, ಪ್ರವೇಶ ಪರೀಕ್ಷೆಯನ್ನು ಬರೆಯಲು ಅವಕಾಶ ಕಲ್ಪಿಸುವುದು ಮತ್ತು ಪ್ರವೇಶವನ್ನು ಕಲ್ಪಿಸುವುದು. ಒಂದೊಮ್ಮೆ ನಿಗಧಿತ ಗುರಿಗೆ ಅನುಗುಣವಾಗಿ ಸ್ಥಾನಗಳು ಭರ್ತಿಯಾದರೆ ಹೆಚ್ಚುವರಿಯಾಗಿ ಪ್ರವೇಶ ಅವಕಾಶ ಕಲ್ಪಿಸುವುದು. ಖಾಯಂ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಮಕ್ಕಳಿಗೆ ಮಾತ್ರ ಅನ್ವಯಿಸುತ್ತದೆ.

**13. ಸರ್ಕಾರಿ ನೌಕರರಿಗೆ ಅವಕಾಶ:-**

ಸರ್ಕಾರದಿಂದೆ ನಿಗಧಿಪಡಿಸಿದ ಆದಾಯ ಮಿತಿಯೊಳಗಿರುವ ಕೇಂದ್ರ ಮತ್ತು ರಾಜ್ಯ ಸರ್ಕಾರಿ ನೌಕರರ ಮಕ್ಕಳು ಅರ್ಜಿ ಸಲ್ಲಿಸಲು ಹಾಗೂ ಪ್ರವೇಶ ಪಡೆಯಲು ಅರ್ಹರಿರುತ್ತಾರೆ. ಆದರೆ ದಾಖಲೆ ಪರಿಶೀಲನೆ ಸಂದರ್ಭದಲ್ಲಿ ವೇತನ ಪ್ರಮಾಣ ಪತ್ರ ಹಾಗೂ ಅಧಿಕೃತ ಪ್ರಾಧಿಕಾರದಿಂದ ಪಡೆದ ಆದಾಯ ಪ್ರಮಾಣ ಪತ್ರವನ್ನು ಹೊಂದಿರತಕ್ಕದ್ದು.

**ವಿಶೇಷ ಸೂಚನೆ:**

ಸಂಗೊಳ್ಳಿ ರಾಯಣ್ಣ ವಸತಿ ಶಾಲೆ (ಹುತಾತ್ಮರ ವಸತಿ ಶಾಲೆ) ಇಲ್ಲಿ 8ನೇ ತರಗತಿ ವಿದ್ಯಾರ್ಥಿಗಳಿಗೆ ನೇರವಾಗಿ ಪ್ರವೇಶ ಕಲ್ಪಿಸಲು ಅವಕಾಶವಿರುವ ಹಿನ್ನಲೆಯಲ್ಲಿ, ಬೆಳಗಾವಿ ಜಿಲ್ಲೆಯ ವಿಭಾಗದ 07 ಜಿಲ್ಲೆಗಳ ವಿದ್ಯಾರ್ಥಿಗಳಿಂದ ಅರ್ಜಿಯನ್ನು ನೇರವಾಗಿ ಸ್ವೀಕರಿಸಿ, ಸ್ಥಳೀಯವಾಗಿ ಪ್ರವೇಶ ಪರೀಕ್ಷೆ ನಡೆಸಿ ವಿದ್ಯಾರ್ಥಿಗಳಿಗೆ ಪ್ರವೇಶ ಅವಕಾಶ ಕಲ್ಪಿಸುವುದು. ಈ ವಿದ್ಯಾರ್ಥಿಗಳಿಗೆ ಪ್ರವೇಶ ಪರೀಕ್ಷೆ ಹೊರತುಪಡಿಸಿ, ಉಳಿದಂತೆ ಮೇಲ್ಕಂಡ ಎಲ್ಲಾ ಅನುಕ್ರಮಗಳನ್ನು ಅನುಸರಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

10/3

(ಕೆ.ಸಿ. ಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ-1,
ಸಮಾಜ ಕಲ್ಯಾಣ ಇಲಾಖೆ.

**ಇವರಿಗೆ,**

1. ಮಹಾಲೇಖಪಾಲರು, (ಲೆಕ್ಕಪತ್ರ/ಲೆಕ್ಕ ಪರಿಶೋಧನೆ) ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
3. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
4. ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ, ಬೆಂಗಳೂರು.
5. ಎಲ್ಲಾ ಜಿಲ್ಲಾಧಿಕಾರಿಗಳು.

6. ಎಲ್ಲಾ ಮುಖ್ಯ ಕಾರ್ಯನಿರ್ವಹಕಾಧಿಕಾರಿಗಳು, ಜಿಲ್ಲಾ ಪಂಚಾಯತ್.

7. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು.

8. ಎಲ್ಲಾ ಜಿಲ್ಲೆಗಳ ಉಪ / ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ.

9. ಎಲ್ಲಾ ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

10. ಮಾನ್ಯ ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.

11. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ.

12. ಸರ್ಕಾರದ ಉಪ ಕಾರ್ಯದರ್ಶಿ-1 ಮತ್ತು 2, ಸಮಾಜ ಕಲ್ಯಾಣ ಇಲಾಖೆ ಇವರ ಆಪ್ತ ಸಹಾಯಕ, ವಿಕಾಸಸೌಧ.

13. ಶಾಖಾ ರಕ್ಷಾ ಕಡತ /ಹೆಚ್ಚುವರಿ ಪ್ರತಿಗಳು.